# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(4)ಪಿಆರ್/320/2000–01
2020–21

ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು
ಬೆಂಗಳೂರು, ದಿನಾಂಕ: 7/1/21

**ಸುತ್ತೋಲೆ**

ವಿಷಯ: ಆರೋಗ್ಯ ವೈದ್ಯಾಧಿಕಾರಿಗಳ ವೃಂದದಿಂದ ಉಪ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಹುದ್ದೆಗೆ ಮುಂಬಡ್ತಿ ನೀಡುವ ಕುರಿತು.

ಉಲ್ಲೇಖ: ಸರ್ಕಾರದ ನಗರಾಭಿವೃದ್ಧಿ ಆದೇಶ ಸಂಖ್ಯೆ: ನಅಇ 973 ಎಂಎನ್‌ಯು 2015 ದಿನಾಂಕ: 14–03–2016.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹೊಸದಾಗಿ 3 ಉಪ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಹುದ್ದೆಗಳು ಸೃಜನೆಯಾಗಿರುವ ಹಿನ್ನೆಲೆಯಲ್ಲಿ, ಪ್ರಸ್ತುತ ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಆರೋಗ್ಯ ವೈದ್ಯಾಧಿಕಾರಿಗಳ ವೃಂದದಿಂದ **(ಎಂ.ಬಿ.ಬಿ.ಎಸ್ ಪದವಿ ಮತ್ತು D.P.H. / ಡಿಗ್ರಿ ಇನ್ ಪಬ್ಲಿಕ್ ಹೆಲ್ತ್, ಆರೋಗ್ಯ ವೈದ್ಯಾಧಿಕಾರಿ ಹುದ್ದೆಯಲ್ಲಿ ಕನಿಷ್ಠ 5 ವರ್ಷಗಳ ಸೇವೆ ಸಲ್ಲಿಸಿರಬೇಕು)** ಖಾಲಿ ಇರುವ ಉಪ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ವೃಂದಕ್ಕೆ ಮುಂಬಡ್ತಿಯನ್ನು ನೀಡಲು ಉದ್ದೇಶಿಸಲಾಗಿರುವ ಹಿನ್ನೆಲೆಯಲ್ಲಿ ಆರೋಗ್ಯ ವೈದ್ಯಾಧಿಕಾರಿಗಳ ಸೇವಾ ಪುಸ್ತಕ, ಇಲಾಖಾ ಪರೀಕ್ಷೆಗಳಲ್ಲಿ **(ಅಕೌಂಟ್ಸ್ ಹೈಯರ್, ಮುನಿಸಿಪಲ್ ಲೋಕಲ್ ಬೋರ್ಡ್, ಜನರಲ್ ಲಾ ಭಾಗ 1 & 2 ಮತ್ತು ಕನ್ನಡ ಬಾಷಾ ಪರೀಕ್ಷೆ / ವಿನಾಯತಿ)** ಉತ್ತೀರ್ಣರಾಗಿರುವ ಮೂಲ ಪ್ರಮಾಣ ಪತ್ರಗಳು, 5 ವರ್ಷಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳೊಂದಿಗೆ ಮತ್ತು ಮುಂಬಡ್ತಿಗೆ ಇಚ್ಚೆ ಇರುವ ಬಗ್ಗೆ / ಇಲ್ಲದಿರುವ ಬಗ್ಗೆ ಐಚ್ಛಿಕತೆ ಪತ್ರವನ್ನು ಈ ಸುತ್ತೋಲೆ ಹೊರಡಿಸಿದ 10 ದಿನಗಳೊಳಗಾಗಿ ಆಯುಕ್ತರ ಕಛೇರಿಯ ಆಡಳಿತ ಶಾಖೆಗೆ ಕಳುಹಿಸಿಕೊಡಲು ಸೂಚಿಸಿದೆ.

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

07/01/2021 7/1/2021 7/1/2021

**ಪ್ರತಿಯನ್ನು** : ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಜಂಟಿ ಆಯುಕ್ತರು (ಆರೋಗ್ಯ) ಮತ್ತು (ಘನತ್ಯಾಜ್ಯ ನಿರ್ವಹಣೆ) ರವರಿಗೆ ಕಳುಹಿಸಿದೆ.
: ಅಪರ / ಜಂಟಿ ಆಯುಕ್ತರು / (ಪಶ್ಚಿಮ) / (ದಕ್ಷಿಣ) / (ಪೂರ್ವ) / (ದಾಸರಹಳ್ಳಿ) / (ರಾ.ರಾ.ನಗರ) / (ಮಹದೇವಪುರ) / (ಯಲಹಂಕ) / (ಬೊಮ್ಮನಹಳ್ಳಿ) ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
: ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) / (ಕ್ಲಿನಿಕಲ್) ರವರಿಗೆ ಕಳುಹಿಸಿದೆ.
: ವಲಯ ಆರೋಗ್ಯಾಧಿಕಾರಿಗಳಿಗೆ ಹಾಗೂ ಉಪ ಆರೋಗ್ಯಾಧಿಕಾರಿಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
: ವಲಯ ಆರೋಗ್ಯ ವೈದ್ಯಾಧಿಕಾರಿಗಳಿಗೆ ಕಳುಹಿಸಿದೆ.
: ಮಾಹಿತಿ ತಂತ್ರಜ್ಞಾನ ಸಲಹೆಗಾರರು ರವರಿಗೆ ಕಳುಹಿಸುತ್ತಾ, ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
: ಕಛೇರಿ ಪ್ರತಿ.

IPP    AIA 12/01    CO-2 12/01